**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:1169/2022**

**ಪಿ.ಡಬ್ಲ್ಯೂ-1**
**ಸಿ.ಡಬ್ಲ್ಯೂ-2**

**ಸಾಕ್ಷಿಗೆ ದಿನಾಂಕ 25-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು : ಸುರೇಶ್

ತಂದೆಯ ಹೆಸರು : ಮಾನಪ್ಪ

ವಯಸ್ಸು : 25 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಜಿ.ಜರಗುಂಟೆ ಗ್ರಾಮ, ಯಲಬುರ್ಗ ತಾಲ್ಲೂಕು

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಪರಿಚಯ ಇರುತ್ತದೆ. ಚಾಸಾ-1 ರವರ ಪರಿಚಯ ಇರುತ್ತದೆ. ಮೃತ ಶರಣ ನನಗೆ ಪರಿಚಯ ಇದ್ದು, ನಮ್ಮ ಗ್ರಾಮದವರು. ಸದರಿ ಶರಣ ಯಾವ ರೀತಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಸಾಕ್ಷಿಯು ಕೃತ್ಯ ಸ್ಥಳ ಪಂಚನಾಮೆ ಮತ್ತು ನಕಾಶೆಯಲ್ಲಿನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳನ್ನು ನಿಪಿ-1 ಮತ್ತು 2 ಎಂದು ಕ್ರಮವಾಗಿ ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-02(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.** ನಿಪಿ-1 ಮತ್ತು 2 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ-3 ಮತ್ತು 4 ರ ಫೋಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಯಿತು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

**ಸಾಕ್ಷಿಯು ವಾಹನ ಪರಿಶೀಲನಾ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.** ನಿಪಿ-5 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 08-03-2020 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಭವಿಸಿದ ಅಪಘಾತಕ್ಕೆ ಸಂಬಂಧಿಸಿದಂತೆ ದಿನಾಂಕ 08-03-2020 ರಂದು ಚಾಸಾ-13 ರವರು ಕೃತ್ಯ ಸ್ಥಳಕ್ಕೆ ಬಂದಿದ್ದು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಾನು ಮತ್ತು ಚಾ.ಸಾ-8 ರವರ ಸಮಕ್ಷಮ ಸಂಜೆ 5-30 ಗಂಟೆಯಿಂದ 6-00 ಗಂಟೆವರೆಗೆ ನಿಪಿ-1 ರಂತೆ ಸ್ಥಳ ಪಂಚನಾಮೆ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರಂತೆ ಕೃತ್ಯಸ್ಥಳ ನಕಾಶೆ ತಯಾರಿಸಿದ್ದು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ ನಿಪಿ-3 ಮತ್ತು 4 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಚಾಸಾ-13 ರವರು ಹೊಸದುರ್ಗ ಪೊಲೀಸ್ ಠಾಣಾ ಕಾಂಪೌಂಡು ಆವರಣದಲ್ಲಿ ನಿಲ್ಲಿಸಿದ್ದ ಅಪಘಾತಕ್ಕೆ ಒಳಗಾದ ವಾಹನ ಪರಿಶೀಲನಾ ಪಂಚನಾಮೆಯನ್ನು ನಿಪಿ-5 ರಂತೆ ಸಂಜೆ 6-15 ರಿಂದ 7-00 ರವರೆಗೆ ನನ್ನ ಮತ್ತು ಚಾಸಾ-8 ರವರ ಸಮಕ್ಷಮದಲ್ಲಿ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ-5 ಕ್ಕೆ ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 20-05-2020 ರಂದು ನಾನು ಚಾ.ಸಾ-14 ವರ ಮುಂದೆ ಹಾಜರಾಗಿ ಹೇಳಿಕೆ ನೀಡಿದ್ದು, ನನ್ನ ಹೇಳಿಕೆಯಲ್ಲಿ "ನಾನು ಮೇಲ್ಕಂಡ ವಿಳಾಸದಲ್ಲಿ ರಿಂದ-------- ಅಜ್ಜಪ್ಪನ ನಿಜವಾದ ಹೆಸರು ದುರ್ಗಪ್ಪ ಆಗಿರುತ್ತ್ದ" ಎಂದು ನನ್ನ

ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. **ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ ಕಾರಣ, ಅದನ್ನು ನಿ.ಪಿ-6 ಎಂದು ಗುರುತಿಸಲಾಯಿತು.**

ನಾನು ನಿಪಿ-1 ರಂತೆ ಮಹಜರ್ ಕಾಲದಲ್ಲಿ ಹಾಜರಿದ್ದು, ನಿಪಿ-5 ರಂತೆ ವಾಹನ ಪರಿಶೀಲನಾ ಪಂಚನಾಮೆ ಸಮಯದಲ್ಲಿ ಹಾಜರಿದ್ದು ನಿ.ಪಿ-6 ರಂತೆ ಹೇಳಿಕೆ ನೀಡಿದ್ದರೂ ಆರೋಪಿ ನನಗೆ ಪರಿಚಯಸ್ಥನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀಮತಿ ಹೆಚ್.ಎಸ್.ಆರ್ ವಕೀಲರಿಂದಃ**

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ಸಲ್ಲಿಸುತ್ತಾರೆ._

ಮರು ವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಇದೆ.**

**(ಪ್ರಸನ್ನಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಹೊಸದುರ್ಗ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:1169/2022**

**ಪಿ.ಡಬ್ಲ್ಯೂ-2**
**ಸಿ.ಡಬ್ಲ್ಯೂ-8**

**ಸಾಕ್ಷಿಗೆ ದಿನಾಂಕ 25-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | : ಯಮುನಪ್ಪ |
| ತಂದೆಯ ಹೆಸರು | : ಹನುಮಪ್ಪ |
| ವಯಸ್ಸು | : 42 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸಸ್ಥಳ | : ಚಿಕ್ಕಬೀಡನಾಳು ಗ್ರಾಮ, ಯಲಬುರ್ಗ ತಾಲ್ಲೂಕು. |

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ಚಾಸಾ-1 ರವರ ಪರಿಚಯ ಇರುವುದಿಲ್ಲ. ಚಾಸಾ-2 ರವರ ಪರಿಚಯ ಇರುತ್ತದೆ. ಮೃತ ಶರಣ ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಸಾಕ್ಷಿಯು ಕೃತ್ಯ ಸ್ಥಳ ಪಂಚನಾಮೆ ಮತ್ತು ನಕಾಶೆಯಲ್ಲಿನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳನ್ನು ನಿಪಿ-1 ಮತ್ತು 2 ಎಂದು ಕ್ರಮವಾಗಿ ಈಗಾಗಲೇ ಗುರುತಿಸಿದ್ದು ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ) ಮತ್ತು ನಿಪಿ-02(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ.** ನಿಪಿ-1 ಮತ್ತು 2 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಪಿ-3 ಮತ್ತು 4 ರ ಫೋಟೋವನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಯಿತು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

**ಸಾಕ್ಷಿಯು ವಾಹನ ಪರಿಶೀಲನಾ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.** ನಿಪಿ-5 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

ಪೊಲೀಸರು ನನ್ನ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕ 08-03-2020 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಭವಿಸಿದ ಅಪಘಾತಕ್ಕೆ ಸಂಬಂಧಿಸಿದಂತೆ ದಿನಾಂಕ 08-03-2020 ರಂದು ಚಾಸಾ-13 ರವರು ಕೃತ್ಯ ಸ್ಥಳಕ್ಕೆ ಬಂದಿದ್ದು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾ.ಸಾ-2 ರವರ ಸಮಕ್ಷಮ ಸಂಜೆ 5-30 ಗಂಟೆಯಿಂದ 6-00 ಗಂಟೆವರೆಗೆ ನಿಪಿ-1 ರಂತೆ ಸ್ಥಳ ಪಂಚನಾಮೆ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರಂತೆ ಕೃತ್ಯಸ್ಥಳ ನಕಾಶೆ ತಯಾರಿಸಿದ್ದು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ ನಿಪಿ-3 ಮತ್ತು 4 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಚಾಸಾ-13 ರವರು ಹೊಸದುರ್ಗ ಪೊಲೀಸ್ ಠಾಣಾ ಕಾಂಪೌಂಡು ಆವರಣದಲ್ಲಿ ನಿಲ್ಲಿಸಿದ್ದ ಅಪಘಾತಕ್ಕೆ ಒಳಗಾದ ವಾಹನ ಪರಿಶೀಲನಾ ಪಂಚನಾಮೆಯನ್ನು ನಿಪಿ-5 ರಂತೆ ಸಂಜೆ 6-15 ರಿಂದ 7-00 ರವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮದಲ್ಲಿ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ-5 ಕ್ಕೆ ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ನಿಪಿ-1 ರಂತೆ ಮಹಜರ್ ಕಾಲದಲ್ಲಿ ಹಾಜರಿದ್ದು, ನಿಪಿ-5 ರಂತೆ ವಾಹನ ಪರಿಶೀಲನಾ ಪಂಚನಾಮೆ ಸಮಯದಲ್ಲಿ ಹಾಜರಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು_ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀಮತಿ ಹೆಚ್.ಎಸ್.ಆರ್ ವಕೀಲರಿಂದಃ</u>**

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ಸಲ್ಲಿಸುತ್ತಾರೆ._

**<u>ಮರು ವಿಚಾರಣೆ : ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಇದೆ.**

**(ಪ್ರಸನ್ನಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಹೊಸದುರ್ಗ.**